ಮಾಡಿ, ತಾನು ಚಂಪಾಳ ಪಕ್ಕದಲ್ಲಿ ಕುಳಿತ. ಬಾಲ ತನ್ನ ಬೆರಳಿನಿಂದ ಅವಳ ತೊಡೆಯಮೇಲೆ ಚಿತ್ತಾರಗಳನ್ನು ಬಿಡಿಸುತ್ತಿದ್ದಾಗ, ಆಕೆ ಚಟ್ ಎಂದು ಕೊಟ್ಟ ಏಟಿಗೆ ಗಾಜಿನ ಬಳೆ ಒಡೆದು ತರಚಿ ಸಣ್ಣದಾಗಿ ರಕ್ತ ಹನಿಯಿತು. ಅಚಾನಕ್ಕಾಗಿ ಕೈಗೆ ಬಿದ್ದ ಏಟಿಗೆ ಮತ್ತು ಢಮ ಢಮ ಎಂದು ತಬಲದವರು ಮಾಡಿದ ಶಬ್ದಕ್ಕೆ ಬಾಲ ಹೆದರಿ ಕೈ ಕಟ್ಟಿ ಕೂತ.

ದಾಸರು, 'ಇವತ್ತು ಒಬ್ಬ ಸತಿ ಶಿರೋಮಣಿಯ ತ್ಯಾಗದ, ಧೈರ್ಯದ ಕಥೆಯನ್ನ ಹೇಳುವಂತೆ ದೈವ ಕೃಪೆಯಾಗಿದೆ. ಕರಗ ಮಹಾತ್ಮೆ ಅಥವಾ ದ್ರೌಪದಿ ಕಲ್ಯಾಣ ಎನ್ನುವ ಕಥೆ ಕೇಳೋಣ. ಇದರಿಂದ ಮಹಾಪಾತಕಗಳು ನಾಶವಾಗಲಿ, ಕೇಳುಗರಿಗೆ ಶುಭವಾಗಲಿ' ಎಂದು ಹರಿಕಥೆ ಶುರುಮಾಡಿದರು. ಹಿರಿಯರೆಲ್ಲ ಹರಿಕಥೆಯಲ್ಲಿ ಮುಳುಗಿದ್ದರೆ ಚಂಪಾ ಮತ್ತು ಬಾಲ ಅಲ್ಲಿಂದ ಮೆಲ್ಲಗೆದ್ದು ಮಹಡಿಗೆ ಹೋದರು. ಕತ್ತಲ ಮೂಲೆಯಲ್ಲಿ ಕೂತರು. ಜನರ ನಡುವೆ ನಿರ್ಭಯವಾಗಿ ಚಿತ್ತಾರ ಬರೆದವನು ಈಗ ತರಗೆಲೆಯಂತೆ ನಡುಗುತ್ತಿದ್ದುದನ್ನು ನೋಡಿ ಚಂಪಾ ಹೊಟ್ಟೆ ಹಿಡಿದು ನಗುತ್ತಿದ್ದಳು. ಇವರ ಜಾಡು ಹಿಡಿದು ಟೀ ಮಂಜ ಅಲ್ಲಿಗೆ ಬಂದಿದ್ದು ಇಬ್ಬರಿಗೂ ಸಮಾಧಾನ ತಂದಿತು.

ಕಳೆದ ಒಂದು ವರುಷದಿಂದ ಅಮ್ಮನನ್ನು ಯಾಮಾರಿಸಿ ಸೇರಿಸಿದ ಹಣ ಹತ್ತು ಸಾವಿರ ಎಂದು ಚಂಪಾ ಲೆಕ್ಕ ಕೊಟ್ಟಳು. ಗಲ್ಲಾದಿಂದ ಮತ್ತು ಅಂಗಡಿಯ ಸಾಮಾನಿನ ಲೆಕ್ಕದಲ್ಲಿ ಕದ್ದ ಹಣ ಇಪ್ಪತ್ತೈದು ಸಾವಿರ, ಅಮ್ಮನ ಹತ್ತಿರ ಕೇಳಿ ಪಡೆದು ಸೇರಿಸಿದ್ದು ಇಪ್ಪತ್ತು ಸಾವಿರ, ಇನ್ನು ಮೂರು ನಾಲ್ಕು ಕಡೆ ಸಾಲ ಕೇಳಿದ್ದೀನಿ, ಹೆಚ್ಚು ಬಡ್ಡಿಗೆ ಐದು ಲಕ್ಷ ಸಿಗುತ್ತೆ. ಜೊತೆಗೆ ಚೈನ್, ಬ್ರೆಸ್‌ಲೆಟ್ಟು ಎಲ್ಲಾ ಸೇರಿದರೆ ಇನ್ನೂ ಒಂದು ಲಕ್ಷ ಆಗುತ್ತದೆ ಎಂದು ಬಾಲ ಲೆಕ್ಕಮಾಡಿ ಹೇಳಿದ. ಟೀ ಮಾರಿ ಉಳಿಸಿದ ಹಣ ಇಪ್ಪತ್ತು ಸಾವಿರ, ಮನೆ ಅಡ್ವಾನ್ಸ್ ಇಪ್ಪತ್ತು ಸಾವಿರ ಬರುತ್ತೆ, ಜೊತೆಗೆ ನಾನು ಒಂದೆರಡು ಕಡೆ ಬಡ್ಡಿಗೆ ಸಾಲ ಹೇಳಿದ್ದೀನಿ, ಎಲ್ಲಾ ಸೇರಿ ಒಂದು ಲಕ್ಷದ ತನಕ ಆಗುತ್ತೆ ಎಂದ ಟೀ ಮಂಜ. ಹತ್ತು ದಿನಗಳ ಬಳಿಕ, ಅಂದರೆ ಕರಗದ ಕೊನೆಯ ದಿನ ಮೂವರೂ ಮಾರುಕಟ್ಟೆಯ ಪಂಜರದಿಂದ ಹಾರಿ ಹೋಗುವುದು ಎಂದು ನಿರ್ಧರಿಸಿದ್ದರು. ಎಲ್ಲಿಗೆ, ಹೇಗೆ ಎಲ್ಲ ನಿರ್ಧಾರವಾಗಿತ್ತು. ಕರಗದ ಕೊನೆ ದಿನ ಎಲ್ಲರೂ ಹೂವಿನ ಕರಗಕ್ಕೆ ಕಾಯುತ್ತಿರುತ್ತಾರೆ. ಆವತ್ತು ರಾತ್ರಿ ಸುಮಾರು ಏಳಕ್ಕೆ ಚಂಪಾ ಹುಷಾರಿಲ್ಲದ ಹಾಗೆ ನಾಟಕ ಆಡುವುದು, ಮನೆಗೆ ಹೋಗಿ ವಿಶ್ರಾಂತಿ ತೊಗೊಂಡು ರಾತ್ರಿ ಹನ್ನೆರಡಕ್ಕೆ ಮತ್ತೆ ಯಾರನ್ನಾದರೂ ಜೊತೆ ಮಾಡಿಕೊಂಡು ಬರುತ್ತೀನಿ ಎಂದು ಹೇಳಿ ಅಲ್ಲಿಂದ ಹೊರಡುವುದು, ಮನೆಗೆ ಹೋಗಿ ಮೊದಲೇ ಜೋಡಿಸಿಕೊಂಡಿರುವ ಬ್ಯಾಗನ್ನು ತೆಗೆದುಕೊಂಡು ರೈಲ್ವೆ ಸ್ಟೇಷನಿಗೆ ಬರುವುದು, ಅಲ್ಲಿಂದ ಎಲ್ಲರೂ ಸೇರಿ ಟ್ರೈನಿಗೆ ಹೈದರಾಬಾದಿಗೆ ಹೊರಡುವುದು – ಇದು ಅವರ ಯೋಜನೆಯಾಗಿತ್ತು. ಆ ಹೊತ್ತಿನಲ್ಲಿ ಎಲ್ಲರೂ ಕರಗದಲ್ಲಿ ಮುಳುಗಿರುತ್ತಾರೆ. ರಾತ್ರಿ ಹನ್ನೆರಡರ ಮೇಲೆ ಆಗುವ ಪೂಜೆಗಳು, ಕರಗದ ಪೂಜಾರಿಯ ನರ್ತನ, ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ಸುತ್ತಿ ತಿರುಗಿ ಬರುವಷ್ಟರಲ್ಲಿ ಸಮಯ ಏಳೋ ಎಂಟೋ ಆಗಿರುತ್ತದೆ. ಪೂಜೆ ಪುನಸ್ಕಾರಗಳು ಮುಗಿಯುವುದರೊಳಗೆ ಒಂಬತ್ತು ಮೀರಿರುತ್ತದೆ. ಅದಾದ ಮೇಲೆ, ಪೋತರಾಜುವಿಗೆ ಕುರಿ ಬಲಿ, ಮತ್ತೆ ಹರಿಕಥೆ ಎಲ್ಲ ಮುಗಿಯುವುದರೊಳಗೆ ಮಧ್ಯಾಹ್ನ ಆಗಿರುತ್ತದೆ. ಅಷ್ಟು ಹೊತ್ತಿಗೆ ನಾವು ಹೈದರಾಬಾದ್ ಸೇರಿ ಬಿಟ್ಟಿರುತ್ತೀವಿ ಎಂದು ಉಪಾಯ ಮಾಡಿದ್ದರು. ಹೈದರಾಬಾದ್‌ನಲ್ಲಿ ಮಂಜನ ಹಳೆಗೆಳೆಯ ಸ್ವಂತದೊಂದು ಸೋಡಾ ಗಾಡಿ ಹಾಕಿಕೊಂಡಿದ್ದಾನೆ. ಅವನ ಖೋಲಿಯಲ್ಲಿ ಸ್ವಲ್ಪ ದಿನವಿದ್ದು, ಒಳ್ಳೆ ಜಾಗ ಹುಡುಕಿ ಅಲ್ಲೊಂದು ಭಕ್ತಿ ಭಂಡಾರ್ ಹಾಕಿಕೊಳ್ಳುವುದು. ಮೊದಲನೇ ವರ್ಷ ಒಂದು ಅಂಗಡಿ ತೆರೆಯುವುದು, ಆಮೇಲೆ ಹೈದರಾಬಾದಿನ ಒಂದೊಂದೇ ಏರಿಯಾದಲ್ಲಿ ಬ್ರಾಂಡ್ ಮಾಡೋದು – ಅದಾದ ಮೇಲೆ ಬೆಂಗಳೂರಿನಲ್ಲಿ ಮಾಡಬೇಕು. ಇನ್ನು ಚಂಪಾ ಬೆಳಗ್ಗೆ ಹೊತ್ತು ಅಂಗಡಿ ನೋಡಿಕೊಳ್ಳುವುದರ ಜೊತೆಗೆ, ಪ್ರೈವೇಟ್ ಆಗಿ ಟೆಂತ್ ಎಕ್ಸಾಮ್ ಕಟ್ಟೋದು,